ತಾವು ಅಧಿಕಾರಿಗಳ ಜೊತೆ ಇವತ್ತೇ ಸಮಾಲೋಚನೆ ಮಾಡಿ, ಮುಂದಿನ 8-10 ದಿವಸದಲ್ಲಾದರೂ ನಿಮ್ಮ ಇಲಾಖೆಗೆ ಹೇಳಿ ಹಣವನ್ನು ಬಿಡುಗಡೆ ಮಾಡಿಸುವಿರಾ? ಅಷ್ಟು ಮಾಡಿಕೊಟ್ಟರೆ ಸಾಕು. ಅದಕ್ಕೆ ಸರಿಯಾದ ಉತ್ತರ ಕೊಡಿ.

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಮಸ್ಯೆಗಳ ಬಗ್ಗೆ ಏನು ಹೇಳಿದ್ದಾರೆ ಆ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಪಗಾರ ಬಿಡುಗಡೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವುದು

17 (266) : ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಹಿಂದೆ ಅರೆಕಾಲಿಕವಾಗಿ ಉಪನ್ಯಾಸಕ ಸೇವೆ ಸಲ್ಲಿಸಿದವರ ಪೈಕಿ ಎಷ್ಟು ಜನರನ್ನು ಖಾಯಂಮಾತಿ ಪ್ರಕ್ರಿಯೆಯಡಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ;

ಆ) ಈ ಪೈಕಿ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಎಷ್ಟು ಉಪನ್ಯಾಸಕರಿಗೆ ಸೇವಾ ಸಕ್ರಮಾತಿ ಮಾಡಲಾಗಿದೆ; (ವಿಷಯವಾರು, ಪೂರ್ಣ ಮಾಹಿತಿ ನೀಡುವುದು);

ಇ) ಇನ್ನುಳಿದ ಸೇವಾ ಸಕ್ರಮಾತಿಗೆ ಬಾಕಿ ಇರುವವರ ಸಂಖ್ಯೆ ಎಷ್ಟು; ಇವರನ್ನು ಯಾವಾಗ ಸಕ್ರಮ ಮಾಡಲಾಗುತ್ತದೆ;

ಈ) ಇವರ ನೇಮಕಾತಿಯಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು; ಸದರಿ ಉಪನ್ಯಾಸಕರುಗಳನ್ನು ಪದವಿ ಪೂರ್ವ ಕಾಲೇಜುಗಳಿಗೆ ನೇಮಕಗೊಳಿಸಲು ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ ಸರ್ಕಾರ ಅನುಮತಿ ನೀಡಲು ಇರುವ ತೊಂದರೆಗಳೇನು, ಯಾವಾಗ ಅನುಮತಿ ನೀಡಲಾಗುತ್ತದೆ;

ಉ) ಈ ಶೈಕ್ಷಣಿಕ ವರ್ಷದಿಂದಲೇ ಇವರುಗಳನ್ನು ಸೇವೆಯಲ್ಲಿ ವಿಲೀನಗೊಳಿಸಲಾಗುವುದೇ; ಇದಕ್ಕೆ ಸರ್ಕಾರ ಕಾಲಮಿತಿಯನ್ನೇನಾದರೂ ಹಾಕಿಕೊಂಡಿದೆಯೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಸ್ನಾತಕೋತ್ತರ ಪದವಿಯಲ್ಲಿ ಶೇಕಡ 55 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ (1993-94 ಮತ್ತು 1994-95) ಎರಡು ವರ್ಷ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಉಪನ್ಯಾಸಕರುಗಳ ಪೈಕಿ 470 ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಹಿಂದೆ ಅರೆಕಾಲಿಕ ಉಪನ್ಯಾಸಕ ಸೇವೆ ಸಲ್ಲಿಸಿದ ಅರ್ಹ 671 ಜನರ ಪೈಕಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 442 ಮಂದಿಯ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಆ) ಮೇಲ್ಕಂಡ 470 ಅರೆಕಾಲಿಕ ಉಪನ್ಯಾಸಕರುಗಳನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂಗೊಳಿಸಲಾಗಿದ್ದು, ಸದರಿ ಮಾಹಿತಿಯನ್ನು ವಿವಿಧ ವಿಷುವಾರು ಅನುಬಂಧ-Iರಲ್ಲಿ ನೀಡಲಾಗಿದೆ.

ಅರ್ಹ 671 ಜನರ ಪೈಕಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 442 ಮಂದಿಯ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

(ವಿಷಯವಾರು ಪೂರ್ಣ ಮಾಹಿತಿ ಒದಗಿಸಿದೆ)

ಇ) ಪ್ರಸ್ತುತ ಇಲಾಖೆಯಲ್ಲಿ 580 ಅರೆಕಾಲಿಕ ಉಪನ್ಯಾಸಕರು ಸೇವಾ ಸಕ್ರಮಾತಿಗೆ ಬಾಕಿ ಉಳಿದಿರುವರು. ಅವರುಗಳನ್ನು 2004-05ನೇ ಸಾಲಿನಲ್ಲಿ ಅಗತ್ಯ ಕಾರ್ಯಭಾರವಿರುವ ಹಾಗೂ ಮಂಜೂರಾದ ಖಾಲಿ ಹುದ್ದೆಗಳ ಎದುರಾಗಿ ಸದರಿ ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಇಡಿ 86 ಡಿಪಿಇ 96 ದಿನಾಂಕ: 15-12-2003ರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಲು ತಯಾರಿಸಿದ ಅರ್ಹತಾ ಪಟ್ಟಿಯ ಪೈಕಿ 204 ಮಂದಿಯ ಸೇವೆಯನ್ನು ಸಕ್ರಮಗೊಳಿಸಬೇಕಾಗಿರುತ್ತದೆ. ಅರ್ಹತಾ ಪಟ್ಟಿಯಲ್ಲಿ ಅರ್ಹರಾದ ಉಪನ್ಯಾಸಕರನ್ನು ಹುದ್ದೆಗಳು ಖಾಲಿಯಾದಂತೆ ಸೇವೆಯಲ್ಲಿ ಸಕ್ರಮಗೊಳಿಸಲಾಗುವುದು.

ಈ) ಅರೆಕಾಲಿಕ ಉಪನ್ಯಾಸಕರುಗಳ ಸಕ್ರಮಾತಿಯು ಮಂಜೂರಾದ ಮತ್ತು ಅಗತ್ಯ ಕಾರ್ಯಭಾರವಿರುವ ಖಾಲಿ ಹುದ್ದೆಗಳ ಕೊರತೆಯಿಂದಾಗಿ ವಿಳಂಬವಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ-64-ಎಸ್‌ಆರ್-96 ದಿನಾಂಕ: 26-7-2003ರಂತೆ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿದ ಅರೆಕಾಲಿಕ ಉಪನ್ಯಾಸಕರನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿಯೂ ಸಹ ವಿಲೀನಗೊಳಿಸಲು ಈಗಾಗಲೆ ಆದೇಶಿಸಿದೆ. ಆದುದರಿಂದ, ವಿಳಂಬವಾಗುತ್ತಿರುವ ಪ್ರಶ್ನೆ ಉದ್ಭವಿಸಿವುದಿಲ್ಲ.

ಉ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2004-05ನೇ ಸಾಲಿನಲ್ಲಿ ಮಂಜೂರಾದ ಮತ್ತು ಅಗತ್ಯ ಕಾರ್ಯಭಾರವಿರುವ ಖಾಲಿ ಹುದ್ದೆಗಳ ಎದುರಾಗಿ ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಅರ್ಹತಾ ಪಟ್ಟಿಯಲ್ಲಿ ಅರ್ಹರಾದ ಉಪನ್ಯಾಸಕರನ್ನು ಹುದ್ದೆಗಳು ಖಾಲಿಯಾದಂತೆ ತುಂಬಲು ಅವಕಾಶವಿದೆ. ಇದಕ್ಕೆ ಕಾಲಮಿತಿಯನ್ನು ನಿಗಧಿಗೊಳಿಸಲು ಸಾಧ್ಯವಿರುವುದಿಲ್ಲ.

GOVERNMENT OF KARNATAKA
DEPARTMENT OF COLLEGIATE EDUCATION
BANGALORE
STATEMENT SHOWING THE INFORMATION REGARDING PART-TIME LECTURERS

Sl.No.	Subject	Absorbed
1	Arabic	0
2	English	25
3	Hindi	12
4	Kannada	41
5	Sanskrit	0
6	Tamil	0
7	Telugu	0
8	Urdu	0
9	Co-operation	0
10	Economics	93

Sl.No.	Subject	Absorbed
11	History	54
12	Journalism	1
13	Philosophy	0
14	Political Science	78
15	Sociology	31
16	Geography	12
17	Rural Development	0
18	Commerce	104
19	Botony	0
20	Chemistry	0
21	Computer-Science	0
22	Electronics	2
23	Geology	0
24	Home-Science	5
25	Mathematics	6
26	Micro-Biology	1
27	Physics	0
28	Psychology	5
29	Sericulture	0
30	Zoology	0
	TOTAL	470

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಹಿಂದೆ ಅರೆಕಾಲಿಕವಾಗಿ ಉಪನ್ಯಾಸಕ ಸೇವೆ ಸಲ್ಲಿಸಿದವರ ಅರ್ಹ 671 ಜನರ ಪೈಕಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 442 ಮಂದಿಯ ಸೇವೆಯನ್ನು ಸಕ್ರಮಗೊಳಿಸಲಾದವರ ವಿಷಯವಾರು ಮಾಹಿತಿ,

ಕ್ರ. ಸಂ.	ವಿಷಯ	ಸೇವಾ ವಿಲೀನಗೊಂಡ ಉಪನ್ಯಸಕರು
1	ಕನ್ನಡ	88
2	ಇಂಗ್ಲೀಷ್	32
3	ಹಿಂದಿ	10
4	ಉರ್ದು	06
5	ಸಂಸ್ಕೃತ	03
6	ಭೂಗೋಳಶಾಸ್ತ್ರ	06
7	ಇತಿಹಾಸ	78
8	ವಾಣಿಜ್ಯಶಾಸ್ತ್ರ	12

ಕ್ರ. ಸಂ.	ವಿಷಯ	ಸೇವಾ ವಿಲೀನಗೊಂಡ ಉಪನ್ಯಾಸಕರು
9	ಅರ್ಥಶಾಸ್ತ್ರ	59
10	ಸಮಾಜಶಾಸ್ತ್ರ	52
11	ರಾಜ್ಯಶಾಸ್ತ್ರ	66
12	ಶಿಕ್ಷಣ	00
13	ಭೌತಶಾಸ್ತ್ರ	06
14	ರಸಾಯನಶಾಸ್ತ್ರ	10
15	ಗಣಿತಶಾಸ್ತ್ರ	03
16	ಜೀವಶಾಸ್ತ್ರ	11
	ಒಟ್ಟು	442

11.40 ಎ.ಎಂ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅನುದಾನಿತ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ ಅರೆಕಾಲಿಕ ಉಪನ್ಯಾಸಕರನ್ನು ಖಾಲಿ ಉಳಿದಿರತಕ್ಕಂಥ ಜಾಗಕ್ಕೆ ನೇಮಕ ಮಾಡಿಕೊಂಡಿದ್ದೀರಾ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಆಗುವುದಿಲ್ಲ, ಮಾಡಿಲ್ಲ. ಸರ್ಕಾರಿ ಕಾಲೇಜಿನಲ್ಲಿ ಈ ಮೊದಲು ಯಾರು ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ, ಅವರನ್ನು ಮಾತ್ರ ನಾವು ಈಗ ಖಾಯಂ ಮಾಡಿ ಅವರಿಗೆ ಆರ್ಡರ್ಸ್ ಕೊಟ್ಟಿದ್ದೇವೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಿಯಮಗಳಡಿಯಲ್ಲಿ ಬರತಕ್ಕಂಥ 10 ವರ್ಷಕ್ಕೂ ಹೆಚ್ಚು ಸೇವೆ ಮಾಡಿರತಕ್ಕಂತ ವಿಜ್ಞಾನ ವಿಷಯಗಳಲ್ಲಿ ಖಾಲಿ ಇರತಕ್ಕಂತ ಮತ್ತು finance departmentನ approval ಪಡೆದಿರತಕ್ಕಂಥ ಹುದ್ದೆಗಳನ್ನು ಏಕೆ ಭರ್ತಿ ಮಾಡಿಲ್ಲ? ಇದನ್ನು ಭರ್ತಿ ಮಾತಕ್ಕಂಥ ಯೋಚನೆ ಸರ್ಕಾರಕ್ಕೆ ಇಲ್ಲವೇ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ?

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಕಾಲೇಜುಗಳಲ್ಲಿ 1993–94, 1994–95 ರ ಎರಡು ವರ್ಷಗಳಲ್ಲಿ ಈ ರೀತಿ ಅರೆಕಾಲಿಕ ಉಪನ್ಯಾಸಕರಾಗಿ ಯಾರು ಕೆಲಸ ಮಾಡಿದ್ದರೋ ಅವರನ್ನು ಖಾಯಂ ಮಾಡುವುದಕ್ಕೆ ಆರ್ಡರ್ಸ್ ಹೊರಡಿಸಲಾಗಿದೆ. ಈಗಾಗಲೇ 470 ಅಭ್ಯರ್ಥಿಗಳಿಗೆ ಆರ್ಡರ್ಸ್ ಕೊಟ್ಟಿದ್ದೇವೆ. ಇನ್ನೂ ಸ್ವಲ್ಪ ಜನರಿಗೆ ಆರ್ಡರ್ಸ್ ಕೊಡಬೇಕಾಗಿದೆ. ಅದನ್ನು ಇಷ್ಟರಲ್ಲಿಯೇ ಕೊಡಬೇಕೆಂದು ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, 'ನೀವು ಅರೆಕಾಲಿಕ ಉಪನ್ಯಾಸಕರನ್ನೂ ಸಹ ನೇಮಕ ಮಾಡಿಕೊಳ್ಳಬಾರದು' ಎಂದು ಇಲ್ಲಿಂದ ನಿರ್ದೇಶಕರು ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತೆ ಈ ಖಾಲಿ ಹುದ್ದೆಗಳನ್ನೂ ಸಹ ಭರ್ತಿ ಮಾಡುವುದಕ್ಕೆ ತಾವು ಸರ್ಕಾರದ ಕಡೆಯಿಂದ ತೀರ್ಮಾನ ತೆಗೆದುಕೊಂಡಿಲ್ಲ. ಅದರ ನಡುವೆ ವಿದ್ಯಾರ್ಥಿಗಳ ಸ್ಥಿತಿ ಏನಾಗಬೇಕು? ಹುದ್ದೆಗಳು ಖಾಲಿ ಇದ್ದು. ನಾವು ಸಿ.ಡಿ.ಸಿ. ಸಭೆಗಳಿಗೆ ಹೋದರೆ ನಮ್ಮ ಮೇಲೆ ವಿದ್ಯಾರ್ಥಿಗಳು ಮುತ್ತಿಗೆ ಹಾಕಿ ಚಳುವಳಿ ಮಾಡುತ್ತಾರೆ. ಅರೆಕಾಲಿಕ ಉಪನ್ಯಾಸಕರನ್ನಾದರೂ ನೇಮಕ ಮಾಡಿಕೊಡಿ, ಅಥವಾ ಇಲ್ಲಿ ಖಾಲಿ

ಇರತಕ್ಕಂತ ಹುದ್ದೆಗಳನ್ನಾದರೂ ಭರ್ತಿ ಮಾಡಿಸಿ ಎಂದು ಚಳುವಳಿ ಮಾಡುತ್ತಾರೆ. ಸರ್ಕಾರದ ಕಡೆಯಿಂದ ನೀವು ಎರಡನ್ನೂ ಮಾಡಲಿಲ್ಲವೆಂತಾದರೆ ಆ ಕಾಲೇಜಿನಲ್ಲಿ ಕಲಿಯುತ್ತಿರತಕ್ಕಂಥ ವಿದ್ಯಾರ್ಥಿಗಳು ಏನಾಗಬೇಕು? ಎಂದು ಕೇಳಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಈಗ ಕೆಲವು ಕಾಲೇಜುಗಳಲ್ಲಿ ವರ್ಕ್‌ಲೋಡ್ ಇಲ್ಲವೆಂಬ ಕಾರಣಕ್ಕಾಗಿ ನೇಮಕ ಮಾಡಿಲ್ಲ. ನೀವು ಖಾಸಗಿ ಕಾಲೇಜುಗಳ ಬಗ್ಗೆ ಕೇಳುತ್ತಿದ್ದೀರಿ. ಖಾಸಗಿ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಸರ್ಕಾರ ಇವತ್ತಿನ ದಿವಸ ಅನುಮತಿ ಕೊಟ್ಟಿಲ್ಲ. ಈಗ ಸರ್ಕಾರಿ ಕಾಲೇಜಿನಲ್ಲಿ ಸಹ ಇವತ್ತಿನ ದಿವಸ ಎಲ್ಲಿ ವರ್ಕ್‌ಲೋಡ್ ಇದೆ, ಎಲ್ಲಿ ವರ್ಕ್‌ಲೋಡ್ ಇಲ್ಲ ಎಂದು ನೋಡಿ, ವರ್ಕ್‌ಲೋಡ್ ಇರುವ ಕಡೆ ಮಾತ್ರ ಖಾಲಿ ಹುದ್ದೆಗಳನ್ನು ತುಂಬುತ್ತಿದ್ದೇವೆ. ವರ್ಕ್‌ಲೋಡ್ ಇಲ್ಲದ ಕಡೆ ತುಂಬುತ್ತಿಲ್ಲ. ಈಗ ಸದ್ಯಕ್ಕೆ ಹುಡುಗರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಖಾಲಿ ಹುದ್ದೆ ತುಂಬಬೇಕೆಂದು ಹೇಳುತ್ತಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲಾ ಕಡೆಯು ಇವತ್ತಿನ ದಿವಸ ಖಾಸಗಿ ಕಾಲೇಜಿಗಳಿಗಂತೂ ನಾವು ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿ ಎಂದು ಪರವಾನಿಗೆ ಕೊಟ್ಟಿಲ್ಲ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಮೂರು ಉಪ ಪ್ರಶ್ನೆಯನ್ನು ಕೇಳಿದ್ದೀರಿ. ಘನಃ ಈ ತರಹ ಎದ್ದುನಿಂತುಕೊಂಡರೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

ತೆಂಗಿನ ಮರದ ಕೀಟ ಭಾದೆಯನ್ನು ನಿಯಂತ್ರಣಗೊಳಿಸುವುದು

18 (285) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೆಂಗಿನ ಮರದ ಕೀಟದ ಬಾಧೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ನುಸಿ ಖಾಯಿಲೆಯಿಂದ ನಾಶವಾಗಿರುವ ಮರಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ನಾಶವಾಗಿರುವ ತೆಂಗಿನ ಮರಗಳಿಗೆ ಪರಿಹಾರ ಧನವನ್ನು ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ತೆಂಗಿನ ಮರದ ಕೀಟದ ಬಾಧೆ ತಪ್ಪಿಸಲು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪಜೀವಿಗಳ ಉತ್ಪಾದನೆ ಮತ್ತು ವಿತರಣೇ, ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಒದಗಿಸುವುದು, ತೆಂಗಿನ ನುಸಿ ನಿಯಂತ್ರಣೆಗಾಗಿ ರಾಜ್ಯದ ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಹಾಗೂ ರೈತರಲ್ಲಿ ಅರಿವು ಮೂಡಿಸಲು 650 ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಈ ಸಾಲಿನಲ್ಲಿಯೂ ಇದನ್ನು ಜಾರಿಗೊಳಿಸಲಾಗುತ್ತಿದೆ. ಅಲ್ಲದೆ, ಪ್ರಚಾರ ಸಾಮಗ್ರಿಗಳ ಮೂಲಕ ರೈತರಿಗೆ ಅರಿವು ನೀಡಲಾಗುತ್ತಿದೆ.